<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆ: **51/2023**</u>

ಪಿ.ಡಬ್ಲುಃ **12** ಸಿಡಬ್ಲುಃ **38**

| | | |
|---|---|---|
| ಸಾಕ್ಷಿಯ ಹೆಸರು | : | ಅಖಿಲಾ |
| ತಂದೆಯ ಹೆಸರು | : | ಅಶ್ವಥ ನಾರಾಯಣ ರಾವ್ |
| ವಯಸ್ಸು | : | **30** ವರ್ಷ |
| ವೃತ್ತಿ | : | ಹೆಚ್ ಆರ್ ಅಡ್ಮಿನಿಸ್ಟ್ರೇಟರ್ , ಪಾಂಡುರಂಗ ರಾವ್ ಆಸ್ಪತ್ರೆ, ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **03-07-2024**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು ಕಳೆದ 8 ವರ್ಷಗಳಿಂದ ಪಾಂಡುರಂಗರಾವ್ ಆಸ್ಪತ್ರೆಯಲ್ಲಿ ಹೆಚ್ ಆರ್ ಅಡ್ಮಿಷ್ಟ್ರೇಟರ್ ಎಂದು ಕೆಲಸ ಮಾಡುತ್ತಿದ್ದೇನೆ. ಹನುಮಕ್ಕ ಅಲಿಯಾಸ್ ಹನು ಎಂಬುವವರಿಗೆ ಸಂಬಂದಪಟ್ಟಂತೆ ವರದಿಯನ್ನು ಕೊಡುವಂತೆ ಪೊಲೀಸರು ಹೇಳಿದ್ದರು. ಅವರು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದು ಮತ್ತು ಅವರಿಗೆ ಸಂಬಂದಪಟ್ಟ ಸರ್ಟಿಫಿಕೇಟ್ ಗಳ ಬಗ್ಗೆ ಕೇಳಿದ್ದರು. ದಿಃ **27-04-2023** ರಲ್ಲಿ ಸದರಿ ವಿವರವನ್ನು ಪೊಲೀಸರು ಕೇಳಿದ್ದರು. ನಾನು ದಿಃ **23-05-2023** ರಂದು ನನ್ನ ವರದಿಯನ್ನು ಕೊಟ್ಟಿದ್ದೆ. ನನ್ನ ವರದಿಯ ಪ್ರಕಾರ ಹನುಮಕ್ಕ ಟ್ರೈನಿ ನರ್ಸ್ ಆಗಿ ನಮ್ಮ ಆಸ್ಪತ್ರೆಯಲ್ಲಿ ಸೆಪ್ಟಂಬರ್ **2021** ರಿಂದ ಜನವರಿ **23** ರ ವರೆಗೆ ಕೆಲಸ ಮಾಡಿದ್ದಳು. ಅವಳಿಗೆ ಪ್ರತಿ ತಿಂಗಳು ರೂ.**6000** ಸಂಬಳವನ್ನು ಕೊಟ್ಟಿದ್ದೆವು. ನಾನು ನೀಡಿದ ಸರ್ಟಿಫಿಕೇಟನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸರ್ಟಿಫಿಕೇಟ್ ನ್ನು ನಿಪಿ-**42** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**42**(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>

ಟ್ರೈನಿ ನರ್ಸ್ ಎಂದು ಕೆಲಸ ಮಾಡಲು ಮಿನಿಮಮ್ ಕ್ವಾಲಿಫೀಕೇಷನ್ ಇರಬೇಕಾಗುತ್ತದೆ ಎಂದರೆ ಸರಿ. ಬಿ ಎಸ್ ಸಿ ನರ್ಸಿಂಗ್ , ಜಿ ಎನ್ ಎಂ ಮತ್ತು ಕೆ ಎನ್ ಎಂ ಕೋರ್ಸ್

ಮಾಡಬೇಕಾಗುತ್ತದೆ ಎಂದರೆ ಸರಿ. ಸದರಿ ಕೋರ್ಸ್ ನ ಸರ್ಟಿಫಿಕೇಟ್ ಗಳು ಇಲ್ಲದೆ ಇದ್ದಲ್ಲಿ ಅಂತವರನ್ನು ಯಾವುದೇ ಆಸ್ಪತ್ರೆಯಲ್ಲಿ ಟ್ರೈನಿ ಸರ್ಸ್ ಆಗಿ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದರೆ ಸರಿ. ನಮ್ಮ ಆಸ್ಪತ್ರೆ ಒಂದು ಫರ್ಮ ಆಗಿದೆ ಎಂದರೆ ಸರಿ. ಆಸ್ಪತ್ರೆಯಲ್ಲಿ ಕೆಲಸ ಮಾಡುವ ಎಲ್ಲಾ ಕೆಲಸಗಾರರಿಗೆ ಒಂದು ಐಡಿ ನಂಬರ್ ಕೊಡಬೇಕಾಗುತ್ತದೆ ಎಂದರೆ ಸರಿ. ಸಂಬಳವನ್ನು ಸಹ ಕಾನೂನಿನ ಪ್ರಕಾರ ಕೊಡಬೇಕು ಎಂದರೆ ಸರಿ. ನಾನು ಆರೋಪಿಗೆ ಸಂಬಳವನ್ನು ನೀಡಿದ್ದ ಬಗ್ಗೆ ಪೊಲೀಸರಿಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ಆರೋಪಿಯು ನಮ್ಮ ಆಸ್ಪತ್ರೆಯಲ್ಲಿ ಕೆಲಸ ಮಾಡಿಲ್ಲದೆ ಇದ್ದರೂ ಸಹ ನಾನು ಪೊಲೀಸರ ಮಾತನ್ನು ಕೇಳಿಕೊಂಡು ಕೇಸಿಗೆ ಅನುಕೂಲವಾಗುವಂತೆ ಸುಳ್ಳು ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ , ಅದರಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.